22	KOLAR	194017	553971	13671.57
23	KOPPAL	130186	387927	7895.72
21	MANDYA	49723	114559	2814.21
25	MYSORE	110898	305496	6419.71
26	RAMANA GARA	44144	122152	3482.94
27	TUMKUR	220059	751017	15674.54
28	UDUPI	16787	30715	614.47
29	UTTARA KANNADA	57182	113584	2930.65
	Total	**3000400**	**7990321**	**212918.88**

ಶಾಲಾ ಮಕ್ಕಳಿಗೆ ಬೈಸಿಕಲ್ ವಿತರಣೆ

797 (790) ಶ್ರೀ ರಾಮಲಿಂಗರೆಡ್ಡಿ (ಬಿ.ಟಿ.ಎಂ.ಲೇಔಟ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ರಲ್ಲಿ ಇಲ್ಲಿಯವರೆಗೆ ರಾಜ್ಯದಲ್ಲಿ ಎಷ್ಟು ಶಾಲಾ ಮಕ್ಕಳಿಗೆ ಬೈಸಿಕಲ್ ವಿತರಿಸಲಾಗಿದೆ;

ಆ) ಬೈಸಿಕಲ್‌ಗಳನ್ನು ಯಾರಿಂದ ಖರೀದಿಸಲಾಗಿದೆ;

ಇ) ಒಂದು ಸೈಕಲ್‌ಗೆ ತಗಲುವ ವೆಚ್ಚವೆಷ್ಟು;

ಈ) ಈ ಸೈಕಲ್ ಖರೀದಿಗಾಗಿ ಸರ್ಕಾರ ನೀಡಿದ ಹಣವೆಷ್ಟು;

ಉ) ಈ ಸೈಕಲ್‌ಗಳು ಕಳಪೆ ದರ್ಜೆಯಿಂದ ಕೂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಈ ಸೈಕಲ್‌ಗಳ ನಿರ್ವಹಣೆಗೆ ಪ್ರತಿ ತಿಂಗಳು ವಿದ್ಯಾರ್ಥಿಗಳಿಗೆ ಸರ್ಕಾರ ನೀಡುವ ಹಣವೆಷ್ಟು;

ಋ) ನೀಡದಿದ್ದಲ್ಲಿ ಈ ಸೈಕಲ್‌ಗಳ ನಿರ್ವಹಣೆ, ರಿಪೇರಿಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 2009–10ನೇ ಸಾಲಿನಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 8ನೇ ತರಗತಿಯ 5,06,223 ಮಕ್ಕಳಿಗೆ ಬೈಸಿಕಲ್ ವಿತರಣೆ ಮಾಡಲಾಗಿದೆ.

ಆ) ಬೆಂಗಳೂರು ವಿಭಾಗಕ್ಕೆ – ಮೆ॥ ಏವನ್ ಸೈಕಲ್ಸ್ ಲಿ., ಲೂಧಿಯಾನ

ಮೈಸೂರು ವಿಭಾಗಕ್ಕೆ – ಮೆ॥ ಹೀರೋ ಸೈಕಲ್ಸ್ ಲಿ., ಲೂಧಿಯಾನ

ಬೆಳಗಾವಿ ವಿಭಾಗಕ್ಕೆ – ಮೆ॥ ಟಿ.ಐ. ಸೈಕಲ್ಸ್ ಆಫ್ ಇಂಡಿಯಾ, ಚೆನ್ನೈ

ಗುಲ್ಬರ್ಗಾ ವಿಭಾಗಕ್ಕೆ – ಮೆ॥ ಅಟ್ಲಾಸ್ ಸೈಕಲ್ಸ್ (ಹ) ಲಿ., ಮಧ್ಯಪ್ರದೇಶ

ಇವರುಗಳಿಂದ ಬೈಸಿಕಲ್‌ಗಳನ್ನು ಖರೀದಿ ಮಾಡಲಾಗಿದೆ.

ಇ) ಪ್ರತಿ ಬೈಸಿಕಲ್ ವೆಚ್ಚ ರೂ. 2390/– (ಬೈಸಿಕಲ್ ಜೋಡಣೆ ಮತ್ತು ಶಾಲಾ ಹಂತದವರೆಗಿನ ಸಾಗಾಣಿಕೆ ವೆಚ್ಚ (ಸೇರಿ)

ಈ) 2009–10ನೇ ಸಾಲಿನಲ್ಲಿ 100 ಕೋಟಿ ಅನುದಾನ ಒದಗಿಸಲಾಗಿದೆ.

ಉ) – ಇಲ್ಲ –

ಉ) ಬೈಸಿಕಲ್‌ಗಳ ನಿರ್ವಹಣೆಗೆ ಸರ್ಕಾರದಿಂದ ಯಾವುದೇ ಹಣ ನೀಡುತ್ತಿರುವುದಿಲ್ಲ.

7) ಸೈಕಲ್‌ಗಳ ನಿರ್ವಹಣೆ, ರಿಪೇರಿಯನ್ನು ಆಯಾ ವಿದ್ಯಾರ್ಥಿಗಳ ಪೋಷಕರೇ ಭರಿಸಬೇಕಾಗಿರುತ್ತದೆ.

ಪಶು ಚಿಕಿತ್ಸಾಲಯ ಕಟ್ಟಡಗಳ ನಿರ್ಮಾಣದ ಬಗ್ಗೆ

798 (78) ಶ್ರೀ ರಾಮಸ್ವಾಮಿಗೌಡ ಬಿ.ವಿ. (ಕುಣಿಗಲ್) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ತಾಲ್ಲೂಕಿನಲ್ಲಿ ಬೇಡಿಕೆಯಿರುವ ಪಶುಚಿಕಿತ್ಸಾಲಯ ಕಟ್ಟಡಗಳೆಷ್ಟು (ಮಾಹಿತಿ ಒದಗಿಸುವುದು);